## ॥ ಧರ್ಮಕ್ಕೆ ಕೈ ಬಾರದೀ ಕಾಲ ॥

ಧರ್ಮಕ್ಕೆ ಕೈ ಬಾರದೀ ಕಾಲ ।
ಪಾಪ ಕರ್ಮಕ್ಕೆ ಮನಸೋಲಲೋದೀ ಕಲಿ ಕಾಲ ॥ ಪ ॥

ದಂಡದ್ರೋಹಕೆ ಉಂಟು । ಪುಂಡು ಪೋಕರಿಗುಂಟು ।
ಹೆಂಡತಿ ಮಕ್ಕಳಿಗಿಲ್ಲವೀ ಕಾಲ ॥
ದಿಂಡೇರಿಗುಂಟು । ಜಗಭಂಡರಿಗುಂಟು ।
ಅಂಡಲೆವರಿಗಿಲ್ಲವೀ ಕಾಲ ॥ ೧ ॥

ಮತ್ತೆ ಸುಳ್ಳರಿಗುಂಟು । ನಿತ್ಯ ಹಾದರಕುಂಟು ।
ಉತ್ತಮರಿಗಿಲ್ಲವೀ ಕಾಲ ॥
ತೊತ್ತೇರಿಗುಂಟು । ತಾಟಕಿಗುಂಟು ।
ಹೆತ್ತತಾಯಿಗಿಲ್ಲವೀ ಕಾಲ ॥ ೨ ॥

ಹುಸಿ ದಿಟವಾಯಿತು । ರಸ ಕಸವಾಯಿತು ।
ಸೊಸೆ ಅತ್ತೆಯ ದಂಡಿಸೋದೀ ಕಾಲ ॥
ಬಿಸಜಾಕ್ಷ ಪುರಂದರವಿಠಲನ ಮನದಲ್ಲಿ ।
ಸ್ತುತಿಸುವವರಿಗಿಲ್ಲವೀ ಕಾಲ ॥ ೩ ॥